ಸಾಕ್ಷಿಯನ್ನು ದಿನಾಂಕ 13.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಜಿ ಎ. ಕೆ ವಕೀಲರಿಂದಃ**

ನನ್ನ ಅಣ್ಣ ನಾಗರಾಜಪ್ಪ ಮೃತರಾಗಿ ಸು. 20 ವರ್ಷ ಆಗಿರುತ್ತದೆ. ನನ್ನ ತಂದೆ ಮೃತರಾಗಿ ಸು. 30 ವರ್ಷ ಆಗಿರುತ್ತದೆ. ನನ್ನ ತಾಯಿ ನಂಜಮ್ಮ ನನ್ನ ಜೊತೆ ವಾಸವಾಗಿದ್ದಾರೆ. ಪ್ರತಿವಾದಿಗಳು 8 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ನಮ್ಮ ತಾಯಿ 1 ಎಕರೆ 9 ಗುಂಟೆ ಜಮೀನು ಹಾಗೂ ನಾನು 1 ಎಕರೆ 15 ಗುಂಟೆ ಜಮೀನಿನಲ್ಲಿ ಸು. 25 ವರ್ಷಗಳಿಂದ ಅಂದರೆ ನಮ್ಮ ಅಣ್ಣ ಮೃತರಾದ ನಂತರ ವ್ಯವಸಾಯ ಮಾಡುತ್ತಿದ್ದೇವೆ. ಈ 1 ಎಕರೆ 9 ಗುಂಟೆ ಜಮೀನಿನ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಹಾಗೂ 1 ಎಕರೆ 15 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಖಾತೆ ಇರುತ್ತದೆ. ನನ್ನ ಹೆಸರಿನಲ್ಲಿ ಇರುವ 1 ಎಕರೆ 15 ಗುಂಟೆ ಜಮೀನಿನ ಸರ್ವೆ ನಂ. 275/2 ಎಂದರೆ ಸರಿ. ಈ ಸರ್ವೆ ನಂ. 275/2 ಪೋಡ್ ಆಗುವುದಕ್ಕೆ ಮುಂಚೆ ಸರ್ವೆ ನಂ. 275 ಆಗಿತ್ತು ಎಂದರೆ ಸರಿ. 1 ಎಕರೆ 15 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಿಃ 15.05.2007 ರಲ್ಲಿ ರೂ. 25,000/- ಹಾಗೂ ದಿಃ 11.01.2012 ರಲ್ಲಿ ರೂ. 70,000/- ಗಳನ್ನು ಬ್ಯಾಂಕ್ ನಿಂದ ಸಾಲವಾಗಿ ಪಡೆದಿರುತ್ತೇವೆ ಎಂದರೆ ಸರಿ.

ಲಿಂಗಪ್ಪ ರವರ ಮಗ ಎಲ್ ಚೆನ್ನಪ್ಪ ನಮ್ಮ ಊರಿನ ಗ್ರಾಮದವರಾಗಿರುತ್ತಾರೆ ಎಂದರೆ ಸರಿ. ದಿಃ 06.01.2020 ರಲ್ಲಿ ಈ 1 ಎಕರೆ 15 ಗುಂಟೆ ಜಮೀನನ್ನು ಚನ್ನಪ್ಪ ರವರ ಹೆಸರಿಗೆ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಈ 1 ಎಕರೆ 15 ಗುಂಟೆ ಜಮೀನು ದಿಃ 26.10.2004 ರಂದು ನಮ್ಮ ಕುಟುಂಬದಲ್ಲಿ ಆದ ಪಂಚಾಯಿತಿ ಪಾಲು ಪಾರಿಕತ್ತು ಮೂಲಕ ನನ್ನ ಭಾಗಕ್ಕೆ ಬಂದಿರುತ್ತದೆ ಎಂದು ಖರೀದಿ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ನಾನು ಈ ಜಮೀನನ್ನು ಮಾರಾಟ ಮಾಡಿರುವ ವಿಚಾರ ನನ್ನ ತಾಯಿ ಹಾಗೂ ಉಳಿದ ವಾದಿಯರಿಗೆ ಗೊತ್ತಿರುತ್ತದೆ ಎಂದರೆ ಸರಿ. ನಾನು ಮಾರಾಟ ಮಾಡಿದ 1 ಎಕರೆ 15 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಈ ಜಮೀನು ಖರೀದಿಸಿದ ಚನ್ನಪ್ಪ ರವರನ್ನು ಪ್ರತಿವಾದಿಯನ್ನಾಗಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. 2004-2005 ರಲ್ಲಿ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ಮೌಖಿಕವಾಗಿ ಪಾಲು ವಿಭಾಗ ಮಾಡಿರುತ್ತಾರೆ ಎಂದರೆ ಭಾಗ ಮಾಡಿರಬಹುದು ಆದರೆ ನಮ್ಮನ್ನು ಕರೆಸಿರುವುದಿಲ್ಲ. ಸದರಿ ಮೌಖಿಕ ವಿಭಾಗ ಮಾಡುವ ಸಮಯದಲ್ಲಿ ನಾನು ಹಾಜರು ಇದ್ದೆ. ಸದರಿ ಮೌಖಿಕ ವಿಭಾಗದ ಮೂಲಕ 1 ಎಕರೆ 15 ಗುಂಟೆ ಹಾಗೂ ಸರ್ವೆ ನಂ. 111/1 ರಲ್ಲಿ 1 ಎಕರೆ 9 ಗುಂಟೆ ವಾದಿಗಳಾದ ನಮ್ಮ ಹಿಸ್ಸೆ ಬಂದಿರುತ್ತದೆ ಎಂದರೆ ಸರಿ. ಉಳಿದ ಆಸ್ತಿಗಳನ್ನು ನಮ್ಮ ಅಣ್ಣನ ಕುಟುಂಬದವರಿಗೆ ಕೊಟ್ಟಿದ್ದರು ಎಂದರೆ ಸರಿ. 2004-05 ರಲ್ಲಿ ಕುಟುಂಬದಲ್ಲಿ

ಮೌಖಿಕವಾಗಿ ವಿಭಾಗ ಆಗಿರುವುದರಿಂದ ಹಾಗೂ ಹಿಸ್ಸೆಗಳನ್ನು ವಿಭಜನೆ ಮಾಡಿರುವುದರಿಂದ ಯಾವುದೇ ಕುಟುಂಬದ ಆಸ್ತಿ ವಿಭಾಗಕ್ಕೆ ಬಾಕಿ ಇರುವುದಿಲ್ಲ ಎಂದರ ಸರಿಯಲ್ಲ. ನಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಮಾರಾಟ ಮಾಡಿದ ನಂತರ ಪ್ರತಿವಾದಿಗಳಿಗೆ ಸೇರಿದ ದಾವಾ ಆಸ್ತಿಯನ್ನು ಕಿತ್ತುಕೊಳ್ಳುವ ದುರುದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್
ಗುಂಡ್ಲುಪೇಟೆ